

# ಕ್ಯಾನ್ಸರ್ ಈಸಬೇಕು ಇದ್ದು ಜೈಸಬೇಕು

■ ಕೃಷ್ಣಿ ಶಿರೂರ

ಕ್ಯಾನ್ಸರ್ (ಅರ್ಬುದ) ಬಂತು ಎಂದರೆ ಭಯ, ಆತಂಕದಿಂದ ‘ಜೀವನ ಮುಗಿದೇ ಹೋಯಿತು’ ಎಂದು ತಲೆ ಮೇಲೆ ಕೈಹೊತ್ತು ಕುಳಿತುಕೊಳ್ಳುವವರೇ ಹೆಚ್ಚು. ಇದಕ್ಕೆ ಕಾರಣ, ಕ್ಯಾನ್ಸರ್ ಹುಟ್ಟಿಸುವ ಜೀವ ಭಯ, ಚಿಕಿತ್ಸೆಯ ನೋವು, ಆರ್ಥಿಕ ಹೊರೆ, ಕುಟುಂಬ ನಿರ್ವಹಣೆಯಲ್ಲಿ ಅಡಚಣೆ ಮುಂತಾದವು. ಇಂಥ ಪರಿಸ್ಥಿತಿಯಲ್ಲೂ ಧೈರ್ಯ, ಛಲ, ಆತ್ಮವಿಶ್ವಾಸದಿಂದ ಕ್ಯಾನ್ಸರ್ ಅನ್ನು ಗೆದ್ದೇ ಗೆಲ್ಲುತ್ತೇನೆ ಎಂಬ ಅದಮ್ಯ ಭರವಸೆಯೊಂದಿಗೆ ಚಿಕಿತ್ಸೆ ಪಡೆದು ಸಂಪೂರ್ಣ ಗುಣವಾಗಿ ಹಲವಾರು ವರ್ಷಗಳಿಂದ ಉತ್ತಮ ಬದುಕು ಕಟ್ಟಿಕೊಂಡ ಮಂದಿಯೂ ನಮ್ಮ ಮುಂದಿದ್ದಾರೆ. ಫೆ. 4ರ ‘ವಿಶ್ವ ಕ್ಯಾನ್ಸರ್ ದಿನ’ದ ಸಂದರ್ಭದಲ್ಲಿ ಕ್ಯಾನ್ಸರ್ ಜೈಸಿದ ಮೂವರು ‘ಮಹನೀಯರ’ ಈ ಕಥನ, ಕ್ಯಾನ್ಸರ್‌ನೊಂದಿಗೆ ಹೋರಾಡುವವರ ಜೀವನಕ್ಕೆ ಸ್ಫೂರ್ತಿ ನೀಡುವಂತಿದೆ. ಇದು ಈ ಸಂಚಿಕೆಯ ಸುಧಾ ವಿಶೇಷ.